ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ ಅಹಕು 2016-17

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 02-02-2017

## ಜ್ಞಾ ಪ ನ

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯ ಮಾನ್ಯತೆ ಮತ್ತು ಅನುದಾನ ಶಾಖೆಯ ಕಡತಗಳ ನಿರ್ವಹಣೆ ಕುರಿತು.

ಉಲ್ಲೇಖ: ಏಕ ಕಡತ ಸಂಖ್ಯೆ: ಪಪೂಶಿ/ಅಹಕು/2016-17 ದಿ: 28.01.2017

-*-

2017ರ ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಪ್ರಕ್ರಿಯೆ ಚಾಲನೆಗೊಂಡಿದ್ದು, ಈ ಪ್ರಕ್ರಿಯೆ ಗಂಭೀರ ಹಾಗೂ ತುಂಬಾ ಗೋಪ್ಯ ಕಾರ್ಯವಾಗಿದೆ. ಈ ಸಂದರ್ಭದಲ್ಲಿ ಪರೀಕ್ಷಾ ಕಾರ್ಯವನ್ನು ಸುಗಮವಾಗಿ ಹಾಗೂ ಯಶಸ್ವಿಯಾಗಿ .ನಿರ್ವಹಿಸಬೇಕಾಗಿರುತ್ತದೆ. ಮಾನ್ಯತೆ ಮತ್ತು ಅನುದಾನದ ಕಾರ್ಯವನ್ನು ಸೂಕ್ತವಾಗಿ ನಿರ್ವಹಿಸಬೇಕಾಗಿವುದರಿಂದ ಸದರಿ ಕಾರ್ಯವನ್ನು ನಿರ್ದೇಶಕರು, ವೃತ್ತಿ ಶಿಕ್ಷಣ ಇಲಾಖೆ ಇವರಿಗೆ ತಾತ್ಕಾಲಿಕವಾಗಿ 15-ಏಪ್ರಿಲ್-2017 ರ ವರೆಗೆ ವಹಿಸಲು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇವರಿಂದ ಏಕ ಕಡತದಲ್ಲಿ ಅನುಮೋದನೆ ಪಡೆಯಲಾಗಿದೆ. ಅದರಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಮಾನ್ಯತೆ ಮತ್ತು ಅನುದಾನ ಶಾಖೆಯ ಮೇಲುಸ್ತುವಾರಿಯನ್ನು ನಿರ್ವಹಿಸಲು ಶ್ರೀ ಜಯಕುಮಾರ್ ಎಸ್. ಕೆ.ಇ.ಎಸ್, ನಿರ್ದೇಶಕರು (ವೃತ್ತಿ ಶಿಕ್ಷಣ) ಇವರಿಗೆ ಆದೇಶಿಸಿದೆ.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಅನುಮೋದನೆ ಮೇರೆಗೆ }

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಅವಗಾಹನೆಗೆ.
3. ಶ್ರೀ ಜಯಕುಮಾರ್ ಎಸ್, ಕೆ.ಇ.ಎಸ್, ನಿರ್ದೇಶಕರು (ವೃತ್ತಿ ಶಿಕ್ಷಣ), ಪದವಿ ಪೂರ್ವ ಶಿಕ್ಷಣ ಭವನ, ಬೆಂಗಳೂರು.
4. ಜಂಟಿ ನಿರ್ದೇಶಕರು (ಮಾನ್ಯತೆ & ಅನುದಾನ) ಇನ್ನು ಮುಂದೆ ಕಡಗಳನ್ನು ಮೇಲೆ ತಿಳಿಸಿದ ಅವಧಿಯವರೆಗೆ ನಿರ್ದೇಶಕರು (ಮಾನ್ಯತೆ & ಅನುದಾನ) ಇವರಿಗೆ ಕಳುಹಿಸಲು ತಿಳಿಸಿದೆ.
5. ನಿರ್ದೇಶಕರು/ಜಂಟಿ ನಿರ್ದೇಶಕರು (ಆಡಳಿತ) (ಪರೀಕ್ಷೆ) (ಶೈಕ್ಷಣಿಕ) ಇವರ ಆಪ್ತಶಾಖೆಗೆ.
6. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಮುಂದಿನ ಕ್ರಮಕ್ಕೆ.
7. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
8. ಸಹಾಯಕ ನಿರ್ದೇಶಕರು/ಶಾಖಾಧಿಕಾರಿಗಳು/ಅಧೀಕ್ಷಕರುಗಳು ಮತ್ತು ಸಿಬ್ಬಂದಿಗಳಿಗೆ.
9. ಕಚೇರಿ ಪ್ರತಿ.